# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**

| | | |
|---|---|---|
| ಭಾಗ – ೪ಎ<br>Part – IVA | ಬೆಂಗಳೂರು, ಶುಕ್ರವಾರ, ೨೪, ಜುಲೈ, ೨೦೨೬ (ಶ್ರಾವಣ, ೦೨, ಶಕವರ್ಷ, ೧೯೪೮)<br>**BENGALURU, FRIDAY, 24, JULY, 2026 (SHRAVANA ,02,ShakaVarsha,1948)** | ನಂ. ೫೫೫<br>**No.555** |


**<u>ಕರ್ನಾಟಕ ಸರ್ಕಾರ</u>**

ಸಂಖ್ಯೆ: ನಅಇ 77 ಎಂಎನ್ಇ 2018 (ಇ)

ಕರ್ನಾಟಕ ಸರ್ಕಾರದ ಸಚಿವಾಲಯ,
ಡಾ|| ಬಿ.ಆರ್. ಅಂಬೇಡ್ಕರ್ ವೀದಿ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:24.07.2026

**<u>ಅಧಿಸೂಚನೆ</u>**

ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976ರ ಕಲಂ 429, 89 ಹಾಗೂ 91ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ (ರಾಜ್ಯದ ಮಹಾನಗರ ಪಾಲಿಕೆಗಳ **ಯುಜಿಡಿ ಹೆಲ್ಪರ್ಸ್** ನೇಮಕಾತಿ) (ಗ್ರೇಟರ್ ಬೆಂಗಳೂರು ಪ್ರಾಧಿಕಾರ ಹೊರತುಪಡಿಸಿ) (ವಿಶೇಷ) ನೇಮಕಾತಿ ನಿಯಮಗಳು 2026 ನಿಯಮಗಳನ್ನು ರಚಿಸುವ ಕುರಿತು ಕರಡನ್ನು ಸದರಿ ಅಧಿನಿಯಮದ ಕಲಂ 421ರ ಉಪ ಕಲಂ(1)ನೇ ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ, ಇದರಿಂದ ಬಾದಿತರಾಗಬಹುದಾದ ವ್ಯಕ್ತಿಗಳಿಂದ ಆಕ್ಷೇಪಣೆ/ಸಲಹೆಗಳನ್ನು ಪಡೆಯುವ ಸಲುವಾಗಿ ಅಧಿಸೂಚನೆ ಸಂಖ್ಯೆ: ನಅಇ:77:ಎಂಎನ್ಇ:2018, ದಿನಾಂಕ:27.05.2026ರಂದು ಕರ್ನಾಟಕ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ 15 ದಿನಗಳೊಳಗಾಗಿ ಆಕ್ಷೇಪಣೆ/ಸಲಹೆಗಳನ್ನು ಸಲ್ಲಿಸುವಂತೆ ಕೋರಲಾಗಿತ್ತು.

ಈ ಬಗ್ಗೆ ಸ್ವೀಕೃತವಾಗಿದ್ದ ಸಲಹೆ/ಆಕ್ಷೇಪಣೆಗಳನ್ನು ಪರಿಶೀಲಿಸಿ, ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976ರ ಕಲಂ 429, 89 ಹಾಗೂ 91ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡ ನಿಯಮಗಳನ್ನು ರಚಿಸಿದೆ.

**ನಿಯಮಗಳು**

**ಶಿರೋನಾಮೆ ಮತ್ತು ಉಪಕ್ರಮ ಮತ್ತು ಅನ್ವಯಿಕ:**

1. ಈ ನಿಯಮಗಳನ್ನು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ (ರಾಜ್ಯದ ಮಹಾನಗರ ಪಾಲಿಕೆಗಳ ಯುಜಿಡಿ ಹೆಲ್ಪರ್ಸ್‌ಗಳ) (ಗ್ರೇಟರ್ ಬೆಂಗಳೂರು ಪ್ರಾಧಿಕಾರ ಹೊರತುಪಡಿಸಿ) (ವಿಶೇಷ) ನೇಮಕಾತಿ ನಿಯಮಗಳು 2026 ಎಂದು ಕರೆಯತಕ್ಕದ್ದು.

(2) ಸದರಿ ನಿಯಮಗಳು ಅಧಿಕೃತ ರಾಜ್ಯ ಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

(3) ಕರ್ನಾಟಕ ನಾಗರೀಕ ಸೇವಾ(ಸಾಮಾನ್ಯ ನೇಮಕಾತಿ) ನಿಯಮಗಳು 1977 ಅಥವಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ (ಅಧಿಕಾರಿ ಮತ್ತು ನೌಕರರ ನೇಮಕಾತಿ) ನಿಯಮಗಳು 2011 ಅಥವಾ ಕರ್ನಾಟಕ ಸೇವಾ ಅಧಿನಿಯಮ 1978 ಷೆಡ್ಯೂಲ್‌ನಲ್ಲಿ ನಿಗಧಿಪಡಿಸಿದ ಅಥವಾ ನಿಗಧಿಪಡಿಸಲಾಗಿದೆ ಎಂದು ಭಾವಿಸಲಾದ ಹುದ್ದೆಗಳ ಇತರೆ ನೇಮಕಾತಿ ನಿಯಮಗಳು (ಕರ್ನಾಟಕ ಅಧಿನಿಯಮ 1990 ರ 14) ಮತ್ತು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಅಧಿನಿಯಮ 1976 (ಕರ್ನಾಟಕ ಅಧಿನಿಯಮ 1977 ರ ಕಲಂ 14) ರ ಈ ನಿಯಮಗಳು ಒಳಗೊಂಡಿದೆ ಎಂದು ಪರಿಭಾವಿಸಿ ಈ ನಿಯಮಗಳನ್ನು ಮಹಾನಗರ ಪಾಲಿಕೆಗಳಲ್ಲಿನ **477 ಖಾಲಿ ಇರುವ ಯುಜಿಡಿ ಹೆಲ್ಪರ್ಸ್ ಹುದ್ದೆಗಳಿಗೆ** ಶೆಡ್ಯೂಲ್‌ನಲ್ಲಿ ನಿಗಧಿಪಡಿಸಲಾದಂತೆ ಅನ್ವಯಿಸತಕ್ಕದ್ದು. ಪರಂತು, ಉಪಬಂಧಿಸಲಾದ ಈ ನಿಯಮಗಳನ್ನು ನೇಮಕಾತಿಗಾಗಿ ಒಂದು ಬಾರಿಗಿಂತ ಹೆಚ್ಚಾಗಿ ಅನ್ವಯಿಸತಕ್ಕದಲ್ಲ.

2. **ಪರಿಭಾಷೆಗಳು:-(**1)ಈ ನಿಯಮಗಳಲ್ಲಿ ಸಾಂದರ್ಭಿಕವಾಗಿ ಇಲ್ಲವಾದಲ್ಲಿ ಅಗತ್ಯವಾದಲ್ಲಿ,

(ಎ) **ನೇಮಕಾತಿ ಪ್ರಾಧಿಕಾರ** ಸಂಬಂಧಿಸಿದ ಆಯಾ ಮಹಾನಗರ ಪಾಲಿಕೆಯ (ಗ್ರೇಟರ್ ಬೆಂಗಳೂರು ಪ್ರಾಧಿಕಾರ ಹೊರತುಪಡಿಸಿ) ಆಯುಕ್ತರುಗಳು, ಅಂದರೆ ಸರ್ಕಾರದ ಅಧಿಸೂಚನೆ ಸಂಖ್ಯೆ:ಯುಡಿಡಿ 188 ಎಂಎನ್ಇ 2022(ಇ) ದಿನಾಂಕ:20.12.2022 ರ ಅಧಿಕಾರ ಪ್ರತ್ಯಾಯೋಜನೆಯ ಆದೇಶದಲ್ಲಿ ವಿವರಿಸಿರುವ ಅಧಿಕಾರ.

(ಬಿ) **ಯುಜಿಡಿ ಹೆಲ್ಪರ್ಸ್** ಎಂದರೆ, ಮಹಾನಗರ ಪಾಲಿಕೆಗಳಲ್ಲಿ, ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಹೊಂದಿ ಕನಿಷ್ಠ 2 ವರ್ಷ ಸೇವೆಯನ್ನು ಸಲ್ಲಿಸಿರಬೇಕು ಮತ್ತು ಈ ನಿಯಮಗಳು ಜಾರಿಗೆ ಬಂದ ದಿನಾಂಕದಲ್ಲಿಯೂ ಕಾರ್ಯ ನಿರ್ವಹಿಸುತ್ತಿರುವ ವ್ಯಕ್ತಿ ಅಥವಾ ವ್ಯಕ್ತಿಗಳು.

(ಸಿ) **'ಅನುಸೂಚಿ'** ಎಂದರೆ ಈ ನಿಯಮಗಳಲ್ಲಿ ಹೇಳಿದ ಅನುಸೂಚಿ.

(ಡಿ) **ಖಾಲಿ ಹುದ್ದೆಗಳು** ಎಂದರೆ ಈ ನಿಯಮಗಳ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಸಂಖ್ಯೆಯ ಯುಜಿಡಿ ಹೆಲ್ಪರ್ಸ್ ವೃಂದದ ಖಾಲಿ ಹುದ್ದೆಗಳು.

(2) ಈ ನಿಯಮಗಳಲ್ಲಿ ಬಳಸಿರುವ ಆದರೆ ಪರಿಭಾಷಿಸದಿರುವ ಪದಗಳು ಮತ್ತು ಪದಾವಳಿಗಳು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ (ಅಧಿಕಾರಿ ಮತ್ತು ನೌಕರರ ನೇಮಕಾತಿ) ನಿಯಮಗಳು 2011 ರಲ್ಲಿ ಅವುಗಳಿಗೆ ನೀಡಲಾದ ಅರ್ಥವನ್ನೇ ಅನ್ವಯಿಸತಕ್ಕದ್ದು.

**(3) ವಯೋಮಿತಿ**

(1) ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮ 1977 ರ ನಿಯಮಗಳು ಅಥವಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ (ಅಧಿಕಾರಿ ಮತ್ತು ನೌಕರರ ನೇಮಕಾತಿ) ನಿಯಮ 2011 ರ ನಿಯಮಗಳಲ್ಲಿ ಏನೇ ಒಳಗೊಂಡಿದ್ದರು ಸದರಿ ಅಧಿಸೂಚನೆ ಜಾರಿಗೆ ಬಂದ ದಿನಾಂಕದಿಂದ ಗರಿಷ್ಠ ವಯೋಮಿತಿ 55 ವರ್ಷಗಳನ್ನು ಮೀರತಕ್ಕದಲ್ಲ

(2) ಅಭ್ಯರ್ಥಿಗಳ ವಯಸ್ಸನ್ನು ಶೈಕ್ಷಣಿಕ ದಾಖಲಾತಿಗಳು /ಆಧಾರ್ ಕಾರ್ಡ್ /ಪಡಿತರ ಚೀಟಿ/ಮತದಾರರ ಗುರುತಿನ ಚೀಟಿ/ ಜನನ ಪ್ರಮಾಣ ಪತ್ರ ದಾಖಲಾತಿಗಳನ್ನಾಧರಿಸಿ ನಿರ್ಧರಿಸತಕ್ಕದ್ದು.

**(4) ನೇಮಕಾತಿ ವಿಧಾನ:**

(1)ನೇಮಕಾತಿ ಪ್ರಾಧಿಕಾರಿಯು, ಈ ನಿಯಮಗಳ ರೀತ್ಯಾ ಭರ್ತಿ ಮಾಡಬೇಕಾದ ಖಾಲಿ ಹುದ್ದೆಗಳನ್ನು ಪರಿಗಣಿಸಿ ಹುದ್ದೆಗಳನ್ನು ಭರ್ತಿ ಮಾಡಲು ಅಗತ್ಯವಿರುವ ಖಾಲಿ ಹುದ್ದೆಗಳ ಸಂಖ್ಯೆ, ಅರ್ಹತೆ, ಆಯ್ಕೆ ವಿಧಾನಗಳನ್ನು ನಿರ್ದಿಷ್ಟಪಡಿಸಿ, ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳ ರೀತ್ಯಾ ಹುದ್ದೆಗಳನ್ನು ವರ್ಗೀಕರಿಸಿ, ರಾಜ್ಯ ಪತ್ರದಲ್ಲಿ ಪ್ರಕಟಿಸಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸತಕ್ಕದ್ದು ಹಾಗೂ ಅಂತಹ ಪ್ರಕಟಣೆಯನ್ನು ರಾಜ್ಯ ಮಟ್ಟದಲ್ಲಿ ವ್ಯಾಪಕ ಪ್ರಚಾರದಲ್ಲಿರುವ ಕನಿಷ್ಟ 2 ದಿನ ಪತ್ರಿಕೆಗಳಲ್ಲಿ ಅಂದರೆ ಒಂದು ಕನ್ನಡ ದಿನಪತ್ರಿಕೆಯಲ್ಲಿರುವಂತೆ ಪ್ರಚುರಪಡಿಸತಕ್ಕದ್ದು.

(2)ಉಪ-ನಿಯಮ (1) ರ ಅಡಿಯಲ್ಲಿ ಮಾಡಲಾದ ಪ್ರಕಟಣೆಯ ಅನುಸಾರ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಂದ, ನೇಮಕಾತಿ ಪ್ರಾಧಿಕಾರವು, ಸೇವಾ ಅವಧಿಯ ಕ್ರಮದಲ್ಲಿ (ಅಂದರೆ ನೇರ ಪಾವತಿ ವ್ಯವಸ್ಥೆ, ಕ್ಷೇಮಾಭಿವೃದ್ಧಿ ಅಥವಾ ದಿನಗೂಲಿ ಅಥವಾ ಗುತ್ತಿಗೆ ಅಥವಾ ಸಮಾನ ಕೆಲಸಕ್ಕೆ ಸಮಾನ ವೇತನ ಅಥವಾ ಹೊರಗುತ್ತಿಗೆ) ಈ ನಿಯಮಗಳ ಅಡಿಯಲ್ಲಿ ನೇಮಕಾತಿಗೆ ಅರ್ಹ ಅಭ್ಯರ್ಥಿಗಳ (ಸಮತಲ ಮತ್ತು ಲಂಬವಾದ) ಅರ್ಹತಾ ಪಟ್ಟಿಯನ್ನು ಸಿದ್ಧಪಡಿಸಬೇಕು. ಪರಂತು ಮಹಾನಗರ ಪಾಲಿಕೆಗಳಲ್ಲಿ 02 ವರ್ಷಗಳಿಗಿಂತ ಕಡಿಮೆಯಿಲ್ಲದಂತೆ ನಿರಂತರವಾಗಿ ನೇರ ಪಾವತಿ ವ್ಯವಸ್ಥೆ, ಕ್ಷೇಮಾಭಿವೃದ್ಧಿ ಅಥವಾ ದಿನಗೂಲಿ ಅಥವಾ ಗುತ್ತಿಗೆ ಅಥವಾ ಸಮಾನ ಕೆಲಸಕ್ಕೆ ಸಮಾನ ವೇತನ ಅಥವಾ ಹೊರಗುತ್ತಿಗೆ ನಿರಂತರವಾಗಿ ಕೆಲಸ ನಿರ್ವಹಿಸುತ್ತಿರುವ ಹಾಗೂ ಈ ನಿಯಮ ಜಾರಿಗೆ ಬಂದ ದಿನಾಂಕದಲ್ಲಿಯೂ ಕಾರ್ಯನಿರ್ವಹಿಸುತ್ತಿರುವ ಯುಜಿಡಿ ಹೆಲ್ಪರ್ಸ್‌ಗಳಿಗೆ ಆಧ್ಯತೆಯನ್ನು ನೀಡತಕ್ಕದ್ದು. ಇದಲ್ಲದೆ, ಕಡಿಮೆ ವರ್ಷಗಳ ಕಾಲ ಕೆಲಸ ಮಾಡಿದ ವ್ಯಕ್ತಿಗಿಂತ ಹೆಚ್ಚು ವರ್ಷಗಳ ಕಾಲ ಕೆಲಸ ಮಾಡಿದ ವ್ಯಕ್ತಿಗೆ ಆದ್ಯತೆ ನೀಡಲಾಗುವುದು. ಆದ್ಯತೆಯು ನೇರ ಪಾವತಿ ವ್ಯವಸ್ಥೆ, ಕ್ಷೇಮಾಭಿವೃದ್ಧಿ, ದಿನಗೂಲಿ, ಗುತ್ತಿಗೆ, ಸಮಾನ ಕೆಲಸಕ್ಕೆ ಸಮಾನ ವೇತನ ಮತ್ತು ಹೊರಗುತ್ತಿಗೆ ಕ್ರಮದಲ್ಲಿರುತ್ತದೆ. ಅವರು ಆಯಾ ಮಹಾನಗರ ಪಾಲಿಕೆಗಳಲ್ಲಿ ಕನಿಷ್ಠ ಎರಡು ವರ್ಷಗಳ ಕಾಲ ಕೆಲಸ ಮಾಡಿದ್ದಕ್ಕಾಗಿ ಮತ್ತು ವೇತನ ಪಡೆದಿದ್ದಕ್ಕಾಗಿ (ವೇತನ, ಫಿಎಫ್, ಇಎಸ್ಐ ದಾಖಲಾತಿ) ಪುರಾವೆಗಳನ್ನು ಹಾಜರುಪಡಿಸಬೇಕು.

(3)ಉಪ ನಿಯಮ (2) ರೀತ್ಯಾ ಆಯ್ಕೆಯಾದ ಅಭ್ಯರ್ಥಿಗಳ ಸಂಖ್ಯೆ ಅಧಿಸೂಚಿಸಲಾದ ಖಾಲಿ ಹುದ್ದೆಗಳ ಸಂಖ್ಯೆಗೆ ಸಮನಾಗಿರತಕ್ಕದ್ದು.

(4)ಆದ್ಯತೆಯನ್ನು ನೀಡುವಲ್ಲಿ ಎರಡು ಮತ್ತು ಅದಕ್ಕಿಂತ ಹೆಚ್ಚಿನ ಅಭ್ಯರ್ಥಿಗಳ ಸೇವಾ ಅವಧಿ ಒಂದೇ ಇದ್ದ ಪಕ್ಷದಲ್ಲಿ, ಅಂತಹ ಅಭ್ಯರ್ಥಿಗಳ ಜೇಷ್ಠತೆಯನ್ನು ಅವರ ವಯಸ್ಸಿಗೆ ಅನುಗುಣವಾಗಿ ಅಂದರೆ ಹೆಚ್ಚು ವಯಸ್ಕರನ್ನು ಕಡಿಮೆ ವಯಸ್ಕರಿಗಿಂತ ಮೇಲೆ ಪರಿಗಣಿಸಬೇಕು ಹಾಗೂ ಹುಟ್ಟಿದ ದಿನಾಂಕ ಹಾಗೂ ಸೇವಾ ಅವಧಿ ಒಂದೇ ಆಗಿದ್ದಲ್ಲಿ ಲಾಟರಿ ಮುಖಾಂತರ ಪರಿಗಣಿಸಬೇಕು.

(5)ನೇಮಕಾತಿ ಪ್ರಾಧಿಕಾರಿಯು ಉಪನಿಯಮ (2) ರ ರೀತ್ಯಾ ಮುಖ್ಯ ಪಟ್ಟಿಯಲ್ಲಿ ಇಲ್ಲದ ಅಭ್ಯರ್ಥಿಗಳಿಗೆ ಹೆಚ್ಚುವರಿ ಪಟ್ಟಿಯನ್ನು ತಯಾರಿಸತಕ್ಕದ್ದು. ಉಪನಿಯಮ (2) ರಂತೆ ಹೆಚ್ಚುವರಿ ಪಟ್ಟಿಯಲ್ಲಿ

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



ಪ್ರತಿಯೊಂದು ಪ್ರವರ್ಗದ ಮೀಸಲಾತಿ (ಸಮತಲ ಮತ್ತು ಲಂಬವಾದ) ಗೆ ಅನುಗುಣವಾಗಿ ಮುಖ್ಯ ಆಯ್ಕೆಪಟ್ಟಿಯಲ್ಲಿಆಯ್ಕೆಯಾಗುವ ಅಭ್ಯಥಿಗಳ ಶೇಕಡ 20% ರಷ್ಟು ಅಭ್ಯರ್ಥಿಗಳಿರತಕ್ಕದ್ದು. ಉಪ ನಿಯಮ(2) ರಂತೆ ಹೆಚ್ಚುವರಿ ಆಯ್ಕೆ ಪಟ್ಟಿಯಲ್ಲಿ ಪ್ರತಿಯೊಂದು ಪ್ರವರ್ಗದ ಮೀಸಲಾತಿ (ಸಮತಲ ಮತ್ತು ಲಂಬವಾದ)ಗೆ ಕನಿಷ್ಟ ಒಬ್ಬ ಅಭ್ಯರ್ಥಿ ಇರತಕ್ಕದ್ದು, ಉಪ ನಿಯಮ (2) ರಂತೆ ಆಯ್ಕೆಯಾಗಿರುವ ಅಭ್ಯರ್ಥಿಗಳು ನಿಗದಿತ ಅವಧಿಯೊಳಗೆ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದಿದ್ದಲ್ಲಿ ಸದರಿ ಅಭ್ಯರ್ಥಿಗೆ ಬದಲಾಗಿ ಅದೇ ಪ್ರವರ್ಗದ ಮೀಸಲಾತಿಯ ಹೆಚ್ಚುವರಿ ಪಟ್ಟಿಯಲ್ಲಿರುವ ಮತ್ತೊಬ್ಬ ಅಭ್ಯರ್ಥಿಯನ್ನು ನೇಮಕಾತಿಗಾಗಿ ಪರಿಗಣಿಸತಕ್ಕದ್ದು.

(6)ಹಾಗೇ ಉಪನಿಯಮ (2) ಮತ್ತು (5) ರಡಿಯಲ್ಲಿ ತಯಾರಿಸಲಾದ ಪಟ್ಟಿಗಳನ್ನು ಸಂಬಂಧಿಸಿದ ಆಯುಕ್ತರುಗಳು ಮಹಾನಗರ ಪಾಲಿಕೆಗಳಲ್ಲಿನ ಸೂಚನಾ ಫಲಕದಲ್ಲಿ ಪ್ರಕಟಿಸತಕ್ಕದ್ದು ಮತ್ತು ಆಯ್ಕೆಯಾದ ಅಭ್ಯರ್ಥಿಗಳಿಗೆ ತಿಳಿಸತಕ್ಕದ್ದು ಹಾಗೂ ನೇಮಕಾತಿ ಪಟ್ಟಿಯನ್ನು ಸಂಬಂಧಪಟ್ಟ ಮಹಾನಗರ ಪಾಲಿಕೆಗಳ ಕಛೇರಿಗಳ ಜಾಲತಾಣದಲ್ಲಿ(Website)ಪ್ರಕಟಿಸತಕ್ಕದ್ದು.

(7)ನೇಮಕಾತಿ ಪ್ರಾಧಿಕಾರಿಯು ಆಯ್ಕೆ ಮಾಡಿದ ಅಭ್ಯರ್ಥಿಗಳ ಪಟ್ಟಿಯು ಅಧಿಸೂಚಿಸಿದ ಖಾಲಿ ಹುದ್ದೆಗಳು ಭರ್ತಿಯಾಗುವವರೆಗೆ ಅಥವಾ ಮುಂದಿನ ಯುಜಿಡಿ ಹೆಲ್ಪರ್ ಆಯ್ಕೆ ಪಟ್ಟಿ ಪ್ರಕಟವಾಗುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಚಾಲ್ತಿಯಲ್ಲಿರುತ್ತದೆ.

5. **ಅಭ್ಯರ್ಥಿಗಳ ನೇಮಕಾತಿ**:

(1) ನೇಮಕಾತಿ ಪ್ರಾಧಿಕಾರಿಯು ನಿಯಮ 4 ರೀತ್ಯಾ ಆಯ್ಕೆ ಪಟ್ಟಿಯಲ್ಲಿ ಒಳಗೊಂಡಿರುವಂತೆ ಅದರನುಸಾರ ಅಭ್ಯರ್ಥಿಗಳ ಹೆಸರು, ಅವರ ಹೆಸರಿನ ಮುಂದೆ ತೋರಿಸಲಾದ ಖಾಲಿ ಹುದ್ದೆಗಳಿಗನುಸಾರ ಆಯ್ಕೆಯಾದ ಅಭ್ಯರ್ಥಿಗಳು ಎಲ್ಲಾ ರೀತಿಯಿಂದ ನೇಮಕಾತಿಗೆ ಅರ್ಹರಾಗಿದ್ದಾರೆ ಎಂಬುದನ್ನು ಅಂಥ ಪರಿಶೀಲನೆಯ ಮೂಲಕ ಖಚಿತ ಪಡಿಸಿಕೊಂಡು ನೇಮಕಾತಿಗಳನ್ನು ಮಾಡತಕ್ಕದ್ದು.

(2) ನಿಯಮ 4 ರ ಉಪನಿಯಮ (6) ರ ರೀತ್ಯಾ ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿದ ಮಾತ್ರಕ್ಕೆ ಅದನ್ನು ಅವರ ನೇಮಕಾತಿಯ ಹಕ್ಕು ಎಂದು ಪರಿಭಾವಿಸತಕ್ಕದ್ದಲ್ಲ.

**ಅನುಸೂಚಿ**

| ಹುದ್ದೆಯವಿವರಹಾಗೂವೇತನ ಶ್ರೇಣಿ. | ಭರ್ತಿಮಾಡಬೇಕಾದಖಾಲಿಹುದ್ದೆಗಳ ಸಂಖ್ಯೆ. | ಕನಿಷ್ಠವಿದ್ಯಾರ್ಹತೆ: |
|---|---|---|
| ಯುಜಿಡಿ ಹೆಲ್ಪರ್<br>ವೇತನ ಶ್ರೇಣಿ<br>( 27000-46675) | 477 | ಕನ್ನಡ ಭಾಷೆ ಮಾತನಾಡಲು ಗೊತ್ತಿರಬೇಕು. |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**(ನಾಗೇಶ್ ಕೆ)**
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
(ಮಹಾನಗರ ಪಾಲಿಕೆ-2).

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

P S BASAVARAJU